# ಯುಗಗಳ ದೈವಿಕ ಯೋಜನೆ
# ಮೊದಲನೆಯ ಲೋಕ

## ಅಧ್ಯಯನ # 4



## ಸತ್ಯವೇದದಲ್ಲಿರುವ
## ಮಹಾ ಸತ್ಯೋಪದೇಶಗಳು

"ನಿನ್ನ ವಾಕ್ಯವೇ ಸತ್ಯವು" - ಯೋಹಾನನು 17:17

# ಸತ್ಯವೇದದಲ್ಲಿರುವ ಮಹಾ ಸತ್ಯೋಪದೇಶಗಳು

## ಅಧ್ಯಯನ # 4

## ಯುಗಗಳ ದೈವೀಕ ಯೋಜನೆ – ಮೊದಲನೆಯ ಲೋಕ

**<u>ದಯವಿಟ್ಟು ಗಮನಿಸಿ:</u> ಈ ತರಗತಿಯಲ್ಲಿ ತಿಳಿಸಲಾಗಿರುವ ಎಲ್ಲಾ ವಾಕ್ಯಗಳನ್ನು ಸತ್ಯವೇದದಲ್ಲಿ ಓದುವ ಮೂಲಕ ನಿಮ್ಮ ಅಭ್ಯಾಸವನ್ನು ಮುಂದುವರಿಸಿರಿ.**

*ಇಲ್ಲಿ ಉಪಯೋಗಿಸಿರುವ ಅತ್ಯಧಿಕವಾದ ವಾಕ್ಯಭಾಗಗಳು(ಕೆ.ಜೆ.ವಿ) ಭಾಷಾಂತರದಿಂದ ತೆಗೆದುಕೊಳ್ಳಲಾಗಿದೆ.*

ಒಬ್ಬನು ಈ ಲೋಕವನ್ನು ಮತ್ತು ಲೋಕದಲ್ಲಿ ನಡೆಯುವುದನ್ನು ಗಮನಿಸಿದಾಗ ಜೀವನದ ಉದ್ದೇಶವೇನೆಂದು ಆಶ್ಚರ್ಯಪಡುತ್ತಾನೆ.



**ಏನಾದರು ಯೋಜನೆ ಇದೆಯೇ?**

**ಈ ಲೋಕವು ಎಲ್ಲಿಗೆ ಹೋಗುತ್ತಿದೆ?**

ದೇಶಗಳಿಗೆ ಯೋಜನೆ ಇದೆಯೆಂದು ನಮಗೆ ಗೊತ್ತಿದೆ – ಭಾರತಕ್ಕೆ ಪಂಚವಾರ್ಷಿಕ ಯೋಜನೆ ಇದೆ!

ಕಂಪನಿಗಳು ಯೋಜನೆ ಮಾಡುತ್ತದೆ, ಕುಟುಂಬಗಳಿಗೆ ಯೋಜನೆಗಳಿವೆ. ಮತ್ತು ಪ್ರತಿಯೊಬ್ಬ ಮನುಷ್ಯನಿಗೂ ಯೋಜನೆಗಳಿವೆ, ಅವರ ಜೀವನವು ಅದರಂತೆ ಹೋಗುತ್ತದೆ!

ಈ ದಿನ ಎಲ್ಲರ ಮನಸ್ಸಿನಲ್ಲಿ ಬರುವ ಪ್ರಶ್ನೆ

## ದೇವರಿಗೆ ಯೋಜನೆ ಇದೆಯೇ?

## ಹೌದು!

ನಾವು ದೇವರನ್ನು ಕುರಿತು ಹೀಗೆ ಓದುತ್ತೇವೆ–

**1 ಕೊರಿಂಥದವರಿಗೆ 14:33**

**“ದೇವರು ಸಮಾಧಾನಕ್ಕೆ ಕಾರಣನೇ ಹೊರತು ಗಲಿಬಿಲಿಗೆ ಕಾರಣನಲ್ಲ”**


ಹೌದು! ನಮ್ಮ ದೇವರು ಕ್ರಮವನ್ನು (ORDER) ಅನುಸರಿಸುವ ದೇವರು ಮತ್ತು ಅವರಿಗೆ ಒಂದು ಯೋಜನೆ ಇದೆ!

ದೇವರು ಅದನ್ನು "ದರ್ಶನ" ವೆಂದು ಕರೆಯುತ್ತಾರೆ.
ನಾವು ಇದನ್ನು ಹೀಗೆ ಓದುತ್ತೇವೆ...

**ಹಬಕ್ಕೂಕ 2:2**

**“ ಆಗ ಯೆಹೋವನು ನನಗೆ ಈ ಉತ್ತರವನ್ನು ದಯಪಾಲಿಸಿದನು– ನಿನಗಾದ ದರ್ಶನವನ್ನು ಬರೆ; ಓದುವವರು ಶೀಘ್ರವಾಗಿ ಓದುವಂತೆ ಹಲಿಗೆಗಳ ಮೇಲೆ ಅದನ್ನು ಕೆತ್ತು”**

ಹೌದು! ಇಲ್ಲಿ ದೇವರು ಪ್ರವಾದಿಯಾದ ಹಬಕ್ಕೂಕನ ಮೂಲಕ ದರ್ಶನವನ್ನು ಬರೆದು, ಓದುವಂತೆ ಹಲಿಗೆಗಳ ಮೇಲೆ ಕೆತ್ತುವುದರ ಬಗ್ಗೆ ಮಾತಾಡುತ್ತಾನೆ.




## ಯುಗಯುಗಾಂತರಗಳ ದೈವಿಕ ಯೋಜನೆಯ ನಕ್ಷೆ

ಈ ಪ್ರವಾದನೆಯು **2000**ಕ್ಕೂ ಅಧಿಕ ವರ್ಷಗಳ ಅನಂತರದಲ್ಲಿ ಅದರ "ಕ್ಲುಪ್ತಕಾಲದಲ್ಲಿ" ನೆರವೇರಿತು ಮತ್ತು ಇಂದು ನಮ್ಮ ಮುಂದೆ ಇರುವ ಈ ನಕ್ಷೆಯೇ ಆ "ದರ್ಶನ"

ದೇವರ ಈ ದೈವೀಕ ಯೋಜನೆಯು ಆದಿಕಾಂಡದಿಂದ ಪ್ರಕಟಣೆಯವರೆಗೂ ಸತ್ಯವೇದದಲ್ಲಿ ಮರೆಮಾಡಿ ಇಡಲಾಗಿದೆ.
ಮತ್ತು ಅದು "ಇಲ್ಲಿ ಸ್ವಲ್ಪ ಅಲ್ಲಿ ಸ್ವಲ್ಪ" ಇದೆ.

ಆದರೆ ತಕ್ಕ ಸಮಯದಲ್ಲಿ ಅದನ್ನು ನಕ್ಷೆ ಅಥವ ಹಲಗೆಯ ಮೇಲೆ ಕೆತ್ತಲು ದೇವರು ನಿರ್ಧರಿಸಿದರು.

ಆದರೆ ನೀವು ಹೀಗೆ ಹೇಳಬಹುದು–

**ನನಗೆ ಇದನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಿಲ್ಲ, ನಾನು ಈ ನಕ್ಷೆಯನ್ನು ಈ ಹಿಂದೆ ನೋಡಿಲ್ಲ.**

ಒಳ್ಳೆಯದು, ಯಾರಾದರೂ ವಾಸ್ತುಶಿಲ್ಪಿ ಕಚೇರಿಗೆ ಕಾಲಿಟ್ಟರೆ ಮತ್ತು ವಾಸ್ತುಶಿಲ್ಪಿ ಕಟ್ಟಡಗಳ ವಿವಿಧ ಯೋಜನೆಗಳು ಮತ್ತು ನೀಲನಕ್ಷೆಗಳನ್ನು ನೋಡಿದರೆ, ವಾಸ್ತುಶಿಲ್ಪಿ ಸ್ವತಃ ಅವುಗಳನ್ನು ನಮಗೆ ವಿವರಿಸಲು ಪ್ರಾರಂಭಿಸುವವರೆಗೂ ನಮ್ಮ ಅನುಭವವು ಅದೇ ಆಗಿರುತ್ತದೆ.



**ಇದು ಮಹಾನ್ ದೈವಿಕ ವಾಸ್ತುಶಿಲ್ಪಿ ಮತ್ತು ಅವನ ದೊಡ್ಡ ಯೋಜನೆಯೊಂದಿಗೆ ಹೋಲುತ್ತದೆ!**

**ಅವನು ಅದನ್ನು ನಮಗೆ ವಿವರಿಸಬೇಕು.**

ಈ ನಕ್ಷೆಯ ಅಧ್ಯಯನವು ಕ್ರಮೇಣವಾಗಿ ಇರುತ್ತದೆ ಮತ್ತು ಇದರ ಬಗ್ಗೆ ಪೂರ್ಣ ತಿಳುವಳಿಕೆಯನ್ನು ಪಡೆಯಲು ಸುಮಾರು ಒಂದು ವರ್ಷ ತೆಗೆದುಕೊಳ್ಳುತ್ತದೆ.

ನಾವು "ದೇವರ ಯೋಜನೆ"ಯನ್ನು ಹೆಚ್ಚು ವಿವರವಾಗಿ ಅಧ್ಯಯನ ಮಾಡುವಾಗ ಅದರ ವಿವಿಧ ಲಕ್ಷಣಗಳನ್ನು ನಾವು ನಿಧಾನವಾಗಿ ಅರ್ಥಮಾಡಿಕೊಳ್ಳಬೇಕು.



ಈ ದಿನ ನಾವು ನಕ್ಷೆಯ **A**,**B** ಮತ್ತು **C** ಯನ್ನು ಮಾತ್ರ ನೋಡೋಣ ಅದನ್ನು ಹೀಗೆ ತೋರಿಸಿದೆ.

1. **ಮೊದಲನೇ ಲೋಕ**
2. **ಎರಡನೇ ಲೋಕ**
3. **ಮೂರನೇ ಲೋಕ**

ಈಗ ಈ ಮೂರು ಲೋಕಗಳನ್ನು ಕುರಿತು ಮುಂದೆ ಓದೋಣ

**2 ಪೇತ್ರ 3:5-7,13**

"ಹೀಗೆ ಮಾತಾಡುವವರು ಒಂದು ಸಂಗತಿಯನ್ನು ತಿಳಿದರೂ ಬೇಕೆಂದು ಮರೆತುಬಿಡುತ್ತಾರೆ; ಅದೇನೆಂದರೆ-ಪೂರ್ವಕಾಲದಲ್ಲಿದ್ದ ಭೂಮ್ಯಾಕಾಶಗಳು ದೇವರ ವಾಕ್ಯದ ಮೂಲಕ ನೀರಿನಿಂದ ಉಂಟಾಗಿ ನೀರಿನಿಂದ ಆಧಾರಗೊಂಡಿರುವಲ್ಲಿ ಆ ನೀರುಗಳಿಂದಲೇ ಆ ಕಾಲದಲ್ಲಿದ್ದ ಲೋಕವು ಜಲಪ್ರಳಯದಲ್ಲಿ ನಾಶವಾಯಿತು. ಆದರೆ ಈಗಿರುವ ಭೂಮ್ಯಾಕಾಶಗಳು ಅದೇ ವಾಕ್ಯದ ಬಲದಿಂದ ಬೆಂಕಿಯ ಮೂಲಕ ನಾಶವಾಗುವದಕ್ಕೆ ಇಡಲ್ಪಟ್ಟಿವೆ; ಮತ್ತು ಭಕ್ತಿಹೀನರ ಶಿಕ್ಷಾವಿಧಿಯೂ ನಾಶವೂ ಉಂಟಾಗುವ ದಿನಕ್ಕಾಗಿ ಆ ಬೆಂಕಿ ಸಿದ್ಧವಾಗಿದೆ "

**Vs. 13** - "ಆದರೆ ನಾವು ದೇವರ ವಾಗ್ದಾನವನ್ನು ನಂಬಿ ನೂತನಾಕಾಶಮಂಡಲವನ್ನೂ ನೂತನ ಭೂಮಂಡಲವನ್ನೂ ಎದುರು ನೋಡುತ್ತಾ ಇದ್ದೇವೆ; ಅವುಗಳಲ್ಲಿ ನೀತಿಯು ವಾಸವಾಗಿರುವದು"

## ಈಗ, ಈ "ಲೋಕ" ಗಳೆಂದರೆ ಏನು?

ಇಲ್ಲಿ ಅಪೊಸ್ತಲನಾದ ಪೇತ್ರನು, ಜಲಪ್ರಳಯದ ಮುಂಚೆ "**ಇದ್ದ ಲೋಕ**" , "**ಈಗಿರುವ ಕೆಟ್ಟ ಲೋಕ**" ಮತ್ತು "**ಆತನ ವಾಗ್ದಾನದ ಪ್ರಕಾರ**" ನೀತಿಯು ವಾಸವಾಗಿರುವ "**ಬರಬೇಕಾದ ಹೊಸ ಲೋಕ**"! ಇವುಗಳನ್ನು ಕುರಿತು ಮಾತನಾಡುತ್ತಾರೆ.

ಈ ಮೂರು ಲೋಕಗಳಲ್ಲಿ "**ಆಕಾಶ ಮತ್ತು ಭೂಮಿ**" ಯು ಇರುವುದಾಗಿ ಹೇಳಲಾಗಿದೆ.

## ಇದರ ಅರ್ಥವೇನು?

ಮುಂದೆ ಕೊಟ್ಟಿರುವ ವಾಕ್ಯವನ್ನು ಓದೋಣ–

**2 ಕೊರಿಂಥದವರಿಗೆ 12:1-4**

"ಹೊಗಳಿಕೊಳ್ಳುವದು ವಿಹಿತವಲ್ಲದಿದ್ದರೂ ಅದು ನನಗೆ ಅವಶ್ಯವಾಗಿದೆ. ಆದದರಿಂದ ಕರ್ತನು ನನಗೆ ದಯಪಾಲಿಸಿದ ದರ್ಶನಗಳನ್ನು ಕುರಿತೂ ತಿಳಿಯಪಡಿಸಿದ ರಹಸ್ಯಗಳನ್ನು ಕುರಿತೂ ಹೇಳುತ್ತೇನೆ. ಕ್ರಿಸ್ತನಲ್ಲಿದ್ದ ಒಬ್ಬ ಮನುಷ್ಯನನ್ನು ಬಲ್ಲೆನು, ಅವನು ಹದಿನಾಲ್ಕು ವರುಷಗಳ ಹಿಂದೆ ಮೂರನೆಯ ಆಕಾಶದ ಪರಿಯಂತರಕ್ಕೂ ಒಯ್ಯಲ್ಪಟ್ಟನು. ಅವನು ದೇಹ ಸಹಿತನಾಗಿ ಒಯ್ಯಲ್ಪಟ್ಟನೋ ದೇಹರಹಿತನಾಗಿ ಒಯಲ್ಪಟ್ಟನೊ ನಾನರಿಯೆ, ದೇವರೇ ಬಲ್ಲನು. ಅಂಥ ಮನುಷ್ಯನು ಪರದೈಸಕ್ಕೆ ಒಯ್ಯಲ್ಪಟ್ಟು ಮನುಷ್ಯರು ನುಡಿಯಲಶಕ್ಯವಾದ ಹೇಳಬಾರದ ಮಾತುಗಳನ್ನು ಕೇಳಿದನೆಂದು ಬಲ್ಲೆನು; ಆ ಸಮಯದಲ್ಲಿ ಅವನು ದೇಹ ಸಹಿತನಾಗಿದ್ದನೋ ದೇಹರಹಿತನಾಗಿದ್ದನೋ ನಾನರಿಯೆ, ದೇವರೇ ಬಲ್ಲನು."




ಇಲ್ಲಿ ಅಪ್ರೊಸ್ತಲನಾದ ಪೌಲನು ತನ್ನ "**ದರ್ಶನ**" ದಲ್ಲಿ "**ಕ್ರಿಸ್ತನಲ್ಲಿದ್ದ ಒಬ್ಬ ಮನುಷ್ಯ**"ನು "**ಮೂರನೇ ಆಕಾಶದ**" ಪರ್ಯಂತಕ್ಕೂ ಒಯಲ್ಪಟ್ಟನು ಮತ್ತು ಆ ಮನುಷ್ಯನು "**ಪರದೈಸ**"ಕ್ಕೆ ಒಯಲ್ಪಟ್ಟು ಮನುಷ್ಯರು "**ನುಡಿಯಲಶಕ್ಯವಾದ**" ಹೇಳಬಾರದ ಮಾತುಗಳನ್ನು ಕೇಳಿದನೆಂದು ಹೇಳುತ್ತಾರೆ.

## ಈ "ಮೂರನೇ ಆಕಾಶ" ಎಂದರೇನು?

## "ಮೊದಲ" ಮತ್ತು "ಎರಡನೆ"ಯ "ಆಕಾಶ"ಗಳೆಲ್ಲಿ?

ಇದನ್ನು ಅರ್ಥಮಾಡಿಕೊಳ್ಳಲು ನಾವು ಸ್ಪಷ್ಟವಾಗಿ ಗ್ರಹಿಸಬೇಕಾದದ್ದೇನೆಂದರೆ ಆಂಗ್ಲ(English) ಸತ್ಯವೇದದಲ್ಲಿ ಆಕಾಶ ಎಂಬ ಪದಕ್ಕೆ ಮೂರು ಅರ್ಥಗಳಿವೆ–



# 1.ಆಕಾಶ

ದೇವರ ಮನೆ ಅಥವಾ ದೇವರ ವಾಸಸ್ಥಳ

**ಪ್ರಸಂಗಿ 5:2**

" ನಿನ್ನ ಬಾಯಿಂದ ಆತುರಪಡದಿರು ಮತ್ತು ದೇವರ ಮುಂದೆ ಯಾವದನ್ನು ಉಚ್ಚರಿಸುವದಕ್ಕೆ ನಿನ್ನ ಹೃದಯವು ದುಡುಕದೇ ಇರಲಿ; ದೇವರು ಪರಲೋಕದಲ್ಲಿದ್ದಾನೆ; ನೀನು ಭೂಮಿಯ ಮೇಲೆ ಇದ್ದೀ ಆದ ಕಾರಣ ನಿನ್ನ ಮಾತುಗಳು ಕೊಂಚವಾಗಿರಲಿ. "





## 2. ಆಕಾಶ

ಸೂರ್ಯ ಚಂದ್ರ ನಕ್ಷತ್ರಗಳಿರುವ ಅಂತರಿಕ್ಷ.

**ಕೀರ್ತನೆಗಳು 19:1**

**“ಆಕಾಶಗಳು ದೇವರ ಮಹಿಮೆಯನ್ನು ಸಾರುತ್ತವೆ; ಅಂತರಿಕ್ಷವು ಆತನ ಕೈ ಕೆಲಸವನ್ನು ತೋರಿಸುತ್ತದೆ.”**



# 3. ಆಕಾಶ

ಸತ್ಯವೇದದಲ್ಲಿ ಈ ಪದವನ್ನು ಅನೇಕ ಬಾರಿ ಉಪಯೋಗಿಸಿದೆ
ಆದರೂ ಅನೇಕರಿಗೆ ಇದರ ಅರ್ಥ ಸ್ವಲ್ಪ ಮಟ್ಟಿಗಷ್ಟೇ ತಿಳಿದಿದೆ. ಇದರ ತಿಳುವಳಿಕೆಯನ್ನು
ಪಡೆದುಕೊಳ್ಳುವುದು ಬಹಳ ಮುಖ್ಯವಾಗಿದೆ.

ಇದನ್ನು ಕುರಿತು ಹೀಗೆ ಓದುತ್ತೇವೆ–

**ಮತ್ತಾಯ 24:35**

**"ಭೂಮ್ಯಾಕಾಶಗಳು ಅಳಿದುಹೋಗುವವು, ಆದರೆ ನನ್ನ ಮಾತುಗಳು ಅಳಿದು ಹೋಗುವದೇ ಇಲ್ಲ"**



ಹೌದು! "**ಅಳಿದು ಹೋಗುವಂಥಹ**"
ಆಕಾಶ ಭೂಮಿಯನ್ನು ಕುರಿತು ಈ
ವಾಕ್ಯವು ಹೇಳುತ್ತದೆ.

**ಯಾವ ಆಕಾಶ ಭೂಮಿ ಅಳಿದು ಹೋಗುತ್ತದೆ? ಮತ್ತು ಏಕೆ?**

**ದೇವರ ವಾಸಸ್ಥಳವಾದ ಆಕಾಶವು ಅಳಿದು ಹೋಗುತ್ತದೆಯೇ?**

**ಖಂಡಿತವಾಗಿಯೂ ಇಲ್ಲ!!**

ಹಾಗಾದರೆ ಯಾವ "ಆಕಾಶ ಮತ್ತು ಭೂಮಿ" ಅಳಿದು ಹೋಗುತ್ತದೆ?

ಆಕಾಶ ಮತ್ತು ಭೂಮಿ" ಇದರ ಅರ್ಥವೇನು?

ನಿಜವಾದ ಆಕಾಶ ಅಥವಾ ನಿಜವಾದ
ಭೂಮಿ ಅಳಿದು ಹೋಗುತ್ತದೆಯೇ?



ಇದನ್ನು ಕುರಿತು ಹೀಗೆ
ಓದುತ್ತೇವೆ–

**ಪ್ರಸಂಗಿ 1:4**

**"ಒಂದು ತಲಾಂತರವು ಗತಿಸುವದು,
ಇನ್ನೊಂದು ತಲಾಂತರವು
ಬರುವದು. ಭೂಮಿಯಾದರೋ
ಶಾಶ್ವತವಾಗಿ ನಿಲ್ಲುವದು"**

ಹೌದು! ಮೇಲಿನ ವಾಕ್ಯವು ಸ್ಪಷ್ಟಪಡಿಸುವುದೇನೆಂದರೆ, ಭೂಮಿಯು "**ಶಾಶ್ವತವಾಗಿ ನಿಲ್ಲುತ್ತದೆ**" ಅದು ಎಂದಿಗೂ ಅಳಿದು ಹೋಗುವುದೇ ಇಲ್ಲ.

ಇದನ್ನು ಕುರಿತು ಕೆಳಗಿನ ವಾಕ್ಯದಲ್ಲಿ ನೋಡೋಣ–

**ಕೀರ್ತನೆಗಳು 104:5**

"ಭೂಮಿಯು ಯುಗಯುಗಾಂತರಕ್ಕೂ ಕದಲದ ಹಾಗೆ ಅದನ್ನು ದೃಢವಾದ ಅಸ್ತಿವಾರದ ಮೇಲೆ ಸ್ಥಾಪಿಸಿದ್ದೀ."

ಭೂಮಿಯ ಅಸ್ತಿವಾರವನ್ನು ಯುಗಯುಗಾಂತರಕ್ಕೂ ಕದಲದ ಹಾಗೆ ಸ್ಥಾಪಿಸಿದೆ! ಹೌದು! ಅದು ಕದಲುವುದೂ ಇಲ್ಲ, ಅಳಿದು ಹೋಗುವುದೂ ಇಲ್ಲ.

ಮತ್ತೆ ಇದನ್ನು ಕುರಿತು ಹೀಗೆ ಓದುತ್ತೇವೆ–

**ಯೆಶಾಯ 45:18**

"ಆಕಾಶಮಂಡಲವನ್ನು ಸೃಷ್ಟಿಸಿದ ಯೆಹೋವನ ಮಾತನ್ನು ಕೇಳಿರಿ; ಆತನೇ ದೇವರು, ಭೂಲೋಕವನ್ನು ನಿರ್ಮಿಸಿ ರೂಪಿಸಿ ಸ್ಥಾಪಿಸಿದನು. ಅದನ್ನು ಶೂನ್ಯಸ್ಥಾನವಾಗಿರಲೆಂದು ಸೃಷ್ಟಿಸದೆ, ಜನನಿವಾಸಕ್ಕಾಗಿಯೇ ರೂಪಿಸಿದನು. ಈತನು ಹೀಗೆನ್ನುತ್ತಾನೆ- ನಾನೇ ಯೆಹೋವನು, ಇನ್ನು ಯಾವನೂ ಅಲ್ಲ"

ಭೂಮಿಯು ಶಾಶ್ವತವಾಗಿರುವುದು ಮಾತ್ರವಲ್ಲದೆ, ಅದು ಎಂದಿಗೂ ಶೂನ್ಯವಾಗಿರದೆ "**ಜನನಿವಾಸ**"ವಾಗಿರುತ್ತದೆ. ಇದನ್ನು ಸತ್ಯವೇದದಲ್ಲಿ ಎಷ್ಟು ಸ್ಪಷ್ಟವಾಗಿ ನೋಡುತ್ತೇವೆ.

**ಹಾಗಾದರೆ ಯಾವ "ಆಕಾಶ ಮತ್ತು ಭೂಮಿ" ಅಳಿದು ಹೋಗುತ್ತದೆ?**



**2 ತಿಮೊಥೆಯನಿಗೆ 2:15 ವಾಕ್ಯದಲ್ಲಿ ನೋಡಿದ ಹಾಗೆ "ಸತ್ಯವೇದವನ್ನು ಸರಿಯಾಗಿ ವಿಭಾಗಿಸಬೇಕು".**

**–ಅಥವಾ ಇಲ್ಲಿ ಉಪಯೋಗಿಸಿರುವ ಭಾಷೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕು.**

**ಮತ್ತಾಯ 24:35 ರಲ್ಲಿ ಉಪಯೋಗಿಸಿರುವ ಭಾಷೆಯು ನಿಜರೂಪದ ಭಾಷೆಯಾಗಿರದೆ ಸಾಂಕೇತಿಕ ಭಾಷೆಯಾಗಿದೆ !**

## ಸಾಂಕೇತಿಕ ಭಾಷೆಯಲ್ಲಿ "ಆಕಾಶ" ಎಂದರೇನು?

ಇದನ್ನು ಕುರಿತು ಹೀಗೆ ಓದುತ್ತೇವೆ–

**ಎಫೆಸದವರಿಗೆ 2:2**

“ ನೀವು ಪೂರ್ವದಲ್ಲಿ ಅಪರಾಧಗಳನ್ನೂ ಪಾಪಗಳನ್ನೂ ಮಾಡುವವರಾಗಿದ್ದು ಇಹಲೋಕಾಚಾರಕ್ಕೆ ಅನುಸಾರವಾಗಿ ನಡೆದುಕೊಂಡಿರಿ; ವಾಯುಮಂಡಲದಲ್ಲಿ ಅಧಿಕಾರ ನಡಿಸುವ ಅಧಿಪತಿಗೆ, ಅಂದರೆ ನಂಬಲೊಲ್ಲದವರನ್ನು ಅವಿಧೇಯತೆಗೆ ಈಗ ಪ್ರೇರೇಪಿಸುವ ಆತ್ಮನಿಗೆ ಅನುಸಾರವಾಗಿ ನಡೆದುಕೊಂಡಿರಿ ”



ಹೌದು! "ವಾಯು ಮಂಡಲದಲ್ಲಿ ಅಧಿಕಾರ ನಡಿಸುವ ಅಧಿಪತಿಯಾದ" ಸೈತಾನನನ್ನು ಸೂಚಿಸುತ್ತದೆ ಮತ್ತು ಈತನ ಭೂಮಿಯ ಅದೃಶ್ಯವಾದ ಆತ್ಮೀಕ ಆಡಳಿತವನ್ನು ಸೂಚಿಸುತ್ತದೆ.

**ಆದ್ದರಿಂದ ಸಾಂಕೇತಿಕವಾದ “ಆಕಾಶ”ವು ಭೂಮಿಯಲ್ಲಿ ಅದೃಶ್ಯವಾದ ಆತ್ಮೀಕ ಆಡಳಿತವನ್ನು ಸೂಚಿಸುತ್ತದೆ.**

ಇದುವೇ ಆಂಗ್ಲಭಾಷೆಯಲ್ಲಿ “ಆಕಾಶ” ಎಂಬ ಪದಕ್ಕೆ ಬರುವ ಮೂರನೆಯ ಮುಖ್ಯವಾದ ಅರ್ಥ.

## ಈಗ "ಭೂಮಿ" ಎಂಬುದಕ್ಕೆ ಸಾಂಕೇತಿಕವಾದ ಅರ್ಥವೇನು?

ಇದನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ–

## ಯೆಶಾಯ 24:1-3, 19,20

“ಇಗೋ, ಯೆಹೋವನು ಲೋಕವನ್ನು ಬರಿದುಮಾಡಿ ಹಾಳಿಗೆ ತಂದು ವಿರೂಪ ಪಡಿಸಿ ಅದರ ನಿವಾಸಿಗಳನ್ನು ಚದುರಿಸಿಬಿಡುವವನಾಗಿದ್ದಾನೆ. ಪ್ರಜೆ ಯಾಜಕ, ದಾಸ ದಣಿ, ತೊತ್ತುಯಜಮಾನಿ, ಕೊಳ್ಳುವವನು ಮಾರುವವನು, ಸಾಲಕೊಡುವವನು ತರುವವನು, ಬಡ್ಡಿ ತೆಗೆಯುವವನು ತೆರುವವನು, ಇವರೆಲ್ಲರಿಗೂ, ಒಂದೇ ಗತಿಯಾಗುವುದು, ಭೂಮಿಯು ಬಟ್ಟಬರಿದಾಗುವುದು ಲೋಕಕ್ಕೆ ಸಂಪೂರ್ಣ ಸುಲಿಗೆಯಾಗುವದು. ಯೆಹೋವನೇ ಇದನ್ನು ನುಡಿದಿದ್ದಾನೆ ”

**Vs.19,20 -**“ಭೂಮಿಯು ಒಡೆದೇ ಇದೆ, ಬಿರಿದೇ ಬಿರಿದಿದೆ, ಕದಲಿಯೇ ಹೋಗಿದೆ. ಭೂಮಿಯು ಅಮಲೇರಿದವನ ಹಾಗೆ ಓಲಾಡುತ್ತದೆ. ಮಂಚಿಕೆಯಂತೆ ತೂಗಾಡುತ್ತದೆ; ಅದರ ದ್ರೋಹವು ಅದಕ್ಕೆ ಭಾರವಾಗಿದೆ, ಅದು ಬಿದ್ದುಹೋಗುತ್ತಿದೆ ತಿರಿಗಿ ಏಳುವದೇ ಇಲ್ಲ ”

ಹೌದು! ಇಲ್ಲಿ "ಭೂಮಿ" ಎಂಬುದು ಗ್ರಹವನ್ನು ಸೂಚಿಸುವುದಿಲ್ಲ
ಆತ್ಮೀಕ ಆಡಳಿತದಡಿಯಲ್ಲಿರುವ ಮಾನವರ ಸಂಘಟಿತ ಸಂಸ್ಥೆಗಳನ್ನು ಸೂಚಿಸುತ್ತದೆ.

**ಆದ್ದರಿಂದ ಸಾಂಕೇತಿಕ “ಭೂಮಿ”ಯು ಕಣ್ಣಿಗೆ ಕಾಣುವಂತಹ ಮನುಷ್ಯರ ಆಡಳಿತವನ್ನು ಸೂಚಿಸುತ್ತದೆ**

ಅದೂ ಅಲ್ಲದೆ, ಅದು ನಾಲ್ಕು ವಿಭಾಗಗಳನ್ನು ಹೊಂದಿದೆ.

**ಸರ್ಕಾರ ಅಥವಾ ರಾಜಕೀಯ**




**ಸಾಮಾಜಿಕ ಅಥವಾ ಸಮುದಾಯ**



**ಧಾರ್ಮಿಕ ಅಥವಾ ಧರ್ಮಗಳು**



**ಹಣಕಾಸು ಅಥವಾ ಆರ್ಥಿಕತೆ.**




ಸಾಂಕೇತಿಕ ಭೂಮಿ ಈ ನಾಲ್ಕು ವ್ಯವಸ್ಥೆಯನ್ನು ಒಳಗೊಂಡಿದೆ.

ಪ್ರಸ್ತುತಕಾಲದಲ್ಲಿ, ಆದಾಮನು ಪಾಪದಲ್ಲಿ ಬಿದ್ದಾಗಿನಿಂದಲೂ ಈ "**ಭೂವ್ಯಾಕಾಶಗಳು**" ಬಿದ್ದು ಹೋದ ದೂತರ ಸಾಧನಗಳಾಗಿರುವ, ಕೆಟ್ಟ ಮನುಷ್ಯರ ಮತ್ತು ಕೆಟ್ಟದೂತರ ಹತೋಟಿಯಲ್ಲಿದೆ!

ಕೆಳಗಿನ ವಾಕ್ಯದಲ್ಲಿ ಓದುವಂತೆ ಸೈತಾನನ ಆಡಳಿತದಲ್ಲಿರುವ ಈ "**ಆಕಾಶ**" ಮತ್ತು "**ಭೂಮಿ**"ಗೆ ಬದಲಾಗಿ ಹೊಸ "**ಆಕಾಶ**" ಮತ್ತು ಹೊಸ "**ಭೂಮಿ**"ಯು ಬರುತ್ತದೆ.

**ಪ್ರಕಟನೆ 21:1**

"ತರುವಾಯ ನೂತನಾಕಾಶಮಂಡಲವನ್ನೂ ನೂತನ ಭೂಮಂಡಲವನ್ನೂ ಕಂಡೆನು. ಮೊದಲಿದ್ದ ಆಕಾಶಮಂಡಲವೂ ಮೊದಲಿದ್ದ ಭೂಮಂಡಲವೂ ಇಲ್ಲದೆ ಹೋದವು; ಇನ್ನು ಸಮುದ್ರವೂ ಇಲ್ಲ."



ಈ "ಹೊಸ" ಆಕಾಶ ಮತ್ತು ಭೂಮಿಯೆಂದರೇನು?

ಇದನ್ನು ಕುರಿತು ನಾವು ಹೀಗೆ ಓದುತ್ತೇವೆ–

**ಯೆಶಾಯ 65:17**

"ಇಗೋ, ನೂತನಾಕಾಶಮಂಡಲವನ್ನೂ ನೂತನ ಭೂಮಂಡಲವನ್ನೂ ಸೃಷ್ಟಿಸುವೆನು; ಮೊದಲಿದ್ದದ್ದನ್ನು (**ಆಕಾಶ ಮತ್ತು ಭೂಮಿ**) ಯಾರೂ ಜ್ಞಾಪಿಸಿಕೊಳ್ಳರು, ಅದು ನೆನಪಿಗೆ ಬಾರದು."

ಹೌದು! ಇದೇ ಭೂಮಿಯ ಹೊಸದಾದ, "ಅದೃಶ್ಯವಾದ ಅಂದರೆ ಕಣ್ಣಿಗೆ ಕಾಣದ ಆತ್ಮೀಕ ಆಡಳಿತ" ಮತ್ತು ಹೊಸದಾದ "ಕಣ್ಣಿಗೆ ಕಾಣುವಂತಹ ಮನುಷ್ಯರ ಆಡಳಿತ"

ಈಗ ಇರುವ "**ಕೆಟ್ಟಲೋಕ**"ದ ಬದಲಾಗಿ **"ನೀತಿಯು ವಾಸಿಸುವಂತಹ"** ಹೊಸ ಲೋಕವು ಅದನ್ನು ಹಿಂಬಾಲಿಸುತ್ತದೆ.

**ಈ ಹೊಸ "ಆಕಾಶ" ಮತ್ತು ಅದೃಷ್ಯವಾದ ಆತ್ಮೀಕ ಆಡಳಿತವು ಹೇಗಿರುತ್ತದೆ?**

ಇದಕ್ಕೆ ಉತ್ತರವನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ–

**ದಾನಿಯೇಲ 7:13-14**

"ನಾನು ಕಂಡ ರಾತ್ರಿಯ ಕನಸ್ಸಿನಲ್ಲಿ ಇಗೋ, ಮನುಷ್ಯಕುಮಾರನಂತಿರುವವನು ಆಕಾಶದ ಮೇಘಗಳೊಂದಿಗೆ
ಬಂದು ಆ ಮಹಾವೃದ್ಧನನ್ನು ಸಮೀಪಿಸಿದನು, ಅವನನ್ನು ಆತನ ಸನ್ನಿಧಿಗೆ ತಂದರು. ಸಕಲಜನಾಂಗಕುಲಭಾಷೆಗಳವರು ಅವನನ್ನು ಸೇವಿಸಲೆಂದು ಅವನಿಗೆ ದೊರೆತನವೂ ಘನತೆಯೂ ರಾಜ್ಯವೂ ಕೊಡೋಣವಾದವು;
ಅವನ ಆಳಿಕೆಯು ಅಂತ್ಯವಿಲ್ಲದ್ದು, ಶಾಶ್ವತವಾದದ್ದು; ಅವನ ರಾಜ್ಯವು ಎಂದಿಗೂ ಅಳಿಯದು."

ಇಲ್ಲಿ ಭೂಮಿಯಲ್ಲಿರುವ ಜನರ ಮೇಲೆ "ಮನುಷ್ಯಕುಮಾರನಂತಿರುವವನಿಗೆ" "ಶಾಶ್ವತವಾದ" ರಾಜ್ಯವೂ,
ದೊರೆತನವೂ ಕೊಡಲ್ಪಟ್ಟಿರುವುದನ್ನು ಕುರಿತು ಓದುತ್ತೇವೆ.

ಹೌದು! ಆ "ಲೋಕ"ವು "ಮನುಷ್ಯಕುಮಾರ"ನಾದ ಯೇಸುವಿನ ಆಡಳಿತದಲ್ಲಿರುತ್ತದೆ.



ಅದನ್ನೇ ಯೇಸು ಪೊಂತ್ಯ ಪಿಲಾತನ ಮುಂದೆ ಹೇಳಿದ್ದು–

**ಯೋಹಾನ 18:36**

"ನನ್ನ ರಾಜ್ಯವು ಈ ಲೋಕದ್ದಲ್ಲ;"

(ಎರಡನೆಯ ಲೋಕದ್ದಲ್ಲ)

ಯೇಸು ಪರಲೋಕ ರಾಜ್ಯವನ್ನು ಕುರಿತು ಹೇಳಿದ್ದಾರೆಂದು
ಅನೇಕರು ತಪ್ಪಾಗಿ ತಿಳಿದುಕೊಂಡಿದ್ದಾರೆ ಮತ್ತು ತಪ್ಪಾಗಿ ಗ್ರಹಿಸಿಕೊಂಡಿದ್ದಾರೆ!

ಯೇಸು ಮೂರನೇ ಲೋಕದ, ಭೂಮಿಯ ಮೇಲಿನ ತನ್ನ "**ಆತ್ಮೀಕ ಆಡಳಿತವನ್ನು**" ಸೂಚಿಸುತ್ತಿದ್ದಾನೆ ಅಥವಾ ಆತನದಾಗುವ "ನೂತನ ಆಕಾಶ" ವನ್ನು ಸೂಚಿಸುತ್ತಿದ್ದಾನೆ.

ಇದಲ್ಲದೆ "ನೂತನ" ಭೂಮಿಯೂ ಇರುತ್ತದೆ. ಅದರೊಂದಿಗೆ ಅದರ ನಾಲ್ಕು ವಿಭಾಗಗಳೆಲ್ಲವೂ ಇರುತ್ತವೆ- ಅವೆಲ್ಲವೂ ನೂತನವಾಗಿರುತ್ತವೆ.

## ಹೊಸ ಸರ್ಕಾರ ಅಥವಾ ರಾಜಕೀಯ ವ್ಯವಸ್ಥೆ

ಇದರ ವಿವರವನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ-

**ಮತ್ತಾಯ 8:11**

**“ಬಹಳ ಜನ ಬಂದು ಪರಲೋಕ ರಾಜ್ಯದಲ್ಲಿ ಅಬ್ರಹಾಮ್ ಇಸಾಕ್ ಯಾಕೋಬ್ ಸಂಗಡ ಕೂಡ್ರುವರು”**

ಏಕೆ ಎಲ್ಲಾ ಜನರು ಅವರ ಬಳಿ ಬರಬೇಕು?
ಏಕೆಂದರೆ ಅವರು ಮನುಕುಲದ ನಾಯಕರಾಗಿರುತ್ತಾರೆ.
ಇದನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ-

**ಕೀರ್ತನೆಗಳು 45:16**

**“ಅರಸನೆ ವಂಶಪಾರಂಪರ್ಯವಾಗಿ ಬಂದ ಸ್ಥಾನದಲ್ಲಿರುವದಕ್ಕೆ ನಿನಗೆ ಮಕ್ಕಳು ಹುಟ್ಟುವರು. ಅವರನ್ನು ದೇಶದಲ್ಲೆಲ್ಲಾ ಅಧಿಕಾರಿಗಳನ್ನಾಗಿ ನೇಮಿಸುವಿ.”**

ಇವರನ್ನು “ಪಿತೃಗಳೆಂದು” ಕರೆಯುತ್ತಾರೆ ಅಪೊಸ್ತಲನಾದ ಪೌಲನು ಈ ನಂಬಿಗಸ್ತರ ವಿವರಣೆಯನ್ನು ಇಬ್ರಿಯರಿಗೆ 11ನೇ ಅದ್ಯಯದಲ್ಲಿ ಮಾತನಾಡಿದ್ದಾರೆ. ಯೇಸು ಶರೀರಧಾರಿಯಾಗಿದ್ದಾಗ ಇವರು
ಯೇಸುವಿಗೆ "ತಂದೆಗಳು" ಅಥವಾ ಪಿತೃಗಳಾಗಿದ್ದರು.

**ಆದರೆ ಈಗ ಅವರೆಲ್ಲಾ ಸತ್ತು ಹೋಗಿದ್ದಾರೆ.**

ಯೇಸು ಶರೀರಧಾರಿಯಾಗಿದ್ದಾಗಲೂ (ಅಂದರೆ ಆತನ ಮೊದಲನೆಯ ಬರುವಿಕೆಯಲ್ಲಿ)ಅವರು ಸತ್ತು ಹೋಗಿದ್ದರು.

ಆದರೆ "ಕ್ರಿಸ್ತನ ಸಂಬಧದಿಂದ ಎಲ್ಲರೂ ಜೀವಿತರಾಗುವರು" **(1 ಕೊರಿಂಥದವರಿಗೆ 15:22)** "ಎರಡನೆಯ ಆದಾಮನಾದ" ಯೇಸುವಿನ ಕರಗಳಿಂದ, ಅವರು ಜೀವಂತವಾಗಿ ಎದ್ದು ಬರುತ್ತಾರೆ **(ಯೋಹಾನನು 11:25)** ಮತ್ತು ಅವರು ಯೇಸುವಿನ ಮಕ್ಕಳಾಗುತ್ತಾರೆ.

ದೇವರ ರಾಜ್ಯವಾದ ಎಲ್ಲಾ ದೇಶಗಳಲ್ಲಿ, ಕಣ್ಣಿಗೆ ಕಾಣುವ ಮನುಕುಲವನ್ನು ಈ ಪಿತೃಗಳು ಭೂಮಿಯಲ್ಲಿ ಆಡಳಿತವನ್ನು ನಡೆಸುತ್ತಾರೆ.

ಇದೇ ಅವರಿಗೆ ಈ ಭೂಮಿಯಲ್ಲಿ "ರಾಜರುಗಳಾಗಿ" ದೊರೆಯುವ ಬಹುಮಾನ.

**ಆಹಾ... ದೇವರ ಯೋಜನೆಯು ಎಷ್ಟೊಂದು ಆಶ್ಚರ್ಯವಾಗಿದೆ?**

ಆ ಮಹಿಮೆಯಾದ ರಾಜ್ಯದಲ್ಲಿ ಈ ಪಿತೃಗಳು ಭೂಮಿಯ ಮೇಲೆ ಕಣ್ಣಿಗೆ ಕಾಣುವಂತಹ ದೊರೆತನ ಮಾಡುವುದು ಎಷ್ಟು ಸೂಕ್ತವಾಗಿದೆ.

## ನೂತನ ಧಾರ್ಮಿಕ ವ್ಯವಸ್ಥೆ

ಇಡೀ ಲೋಕದಲ್ಲಿ ಒಂದೇ ಧರ್ಮವಿರುತ್ತದೆ, ಮತ್ತು ಸತ್ಯ ದೇವರ ಬಗ್ಗೆ ಎಲ್ಲರಿಗೂ ಸಾರ್ವತ್ರಿಕ (ಸರ್ವಸಾಮಾನ್ಯ) ಜ್ಞಾನವಿರುತ್ತದೆ.

**ಜೆಕರ್ಯ 14:19**

**"ಯೆಹೋವನು ಭೂಲೋಕಕ್ಕೆಲ್ಲಾ ರಾಜನಾಗಿರುವನು; ಆ ದಿವದಲ್ಲಿ ಯೆಹೋವನೊಬ್ಬನೇ ದೇವರೆಂದೂ ಆತನ ಹೆಸರೊಂದೇ ಪುತ್ತ್ಯವೆಂದೂ ಎಲ್ಲರಿಗೂ ತಿಳಿದಿರುವದು"**

ಹೌದು! ದೇವರ ಜ್ಞಾನ ಮತ್ತು ದೇವರನ್ನು ಆರಾಧಿಸುವುದರ ಬಗ್ಗೆ ಯಾವ ಗೊಂದಲವಾಗಲಿ ಇರುವುದಿಲ್ಲ.

## ನೂತನ ಸಾಮಾಜಿಕ ವ್ಯವಸ್ಥೆ

ಎಲ್ಲಾ ಮನುಕುಲವು ತಮ್ಮ ಹಕ್ಕು ಮತ್ತು ಅಧಿಕಾರವನ್ನು ಸಮವಾಗಿ ಹೊಂದಿಕೊಳ್ಳುವುದು ಮತ್ತು ಹಣವಂತರಿಗೂ ("**ಬೆಟ್ಟಗಳು**") ಬಡವರಿಗೂ ("**ತಗ್ಗು**") ಇರುವ ಮಹಾ ವ್ಯತ್ಯಾಸವು ಮರೆಯಾಗುತ್ತದೆ.

**ಯೆಶಾಯ 40:4**

**"ಎಲ್ಲಾ ಹಳ್ಳಕೊಳ್ಳಗಳು ಮುಚ್ಚಲ್ಪಡುವವು, ಎಲ್ಲಾ ಬೆಟ್ಟಗುಡ್ಡಗಳು ತಗ್ಗಿಸಲ್ಪಡುವವು, ಮಲೆನಾಡು ಬೈಲುಸೀಮೆಯಾಗುವದು, ಕೊರಕಲ ನೆಲವು ಸಮವಾಗುವದು"**

# ನೂತನ ಆರ್ಥಿಕ ವ್ಯವಸ್ಥೆ

ಮೂರನೇ ಲೋಕದ ನೂತನ ಆರ್ಥಿಕ ವ್ಯವಸ್ಥೆಯಡಿಯಲ್ಲಿ ಯಾರಿಗೂ ತಮ್ಮ ಅಗತ್ಯ ವಸ್ತುಗಳಾದ ಆಹಾರ ಬಟ್ಟೆ ಮತ್ತು ವಸ್ತ್ರಗಳ ಕೊರತೆ ಇರುವದಿಲ್ಲ ಇದನ್ನು ಕುರಿತು ಹೀಗೆ ಓದುತ್ತೇವೆ–

**ಯೆಶಾಯ 65:21**

**"ಅಲ್ಲಿನ ಜನರು ತಾವು ಕಟ್ಟಿದ ಮನೆಗಳಲ್ಲಿ ತಾವೇ ವಾಸಿಸುವರು ತಾವು ಮಾಡಿದ ತೋಟಗಳ ಫಲವನ್ನು ತಾವೇ ಅನುಭವಿಸುವರು."**

ಹೌದು, ಜನರು ತಮ್ಮ ಸ್ವಂತ ಮನೆಗಳಲ್ಲಿ ವಾಸಮಾಡುತ್ತಾರೆ, ಮತ್ತು ಬಾಡಿಗೆ ಮನೆಗಳಲ್ಲಿ ವಾಸಿಸುವ ಅವಶ್ಯಕತೆ ಇರುವುದಿಲ್ಲ!

ಅವರ ಪ್ರಯಾಸದ ಫಲವು ಸಿಹಿಯಾಗಿರುತ್ತದೆ!

ಈಗಿರುವಂತೆ ಸಾಲ ತೆಗೆದುಕೊಂಡಿರುವ ರೈತರು ತಮ್ಮ ಪ್ರಯಾಸದ ಫಲವನ್ನು ಬ್ಯಾಂಕಿಗೆ ಕೊಡುವಂತೆ ಇರುವುದಿಲ್ಲ!

ಹೌದು! ಈ " ಮೂರನೇ ಲೋಕ"ವು ಅಂತ್ಯವಿಲ್ಲದಾಗಿದೆ –

**ಎಫೆಸದವರಿಗೆ 3:21**

**"ಅತ್ಯಧಿಕವಾದದ್ದನ್ನು ಮಾಡಲು ಶಕ್ತನಾದ ದೇವರಿಗೆ ಸಭೆಯಲ್ಲಿಯೂ ಕ್ರಿಸ್ತ ಯೇಸುವಿನಲ್ಲಿಯೂ ತಲತಲಾಂತರಕ್ಕೂ ಯುಗಯುಗಾಂತರಕ್ಕೂ ಸ್ತೋತ್ರ."**

ಆದ್ದರಿಂದ ಲೋಕದ ಅಂತ್ಯವು, ಒಂದು ನಿಗದಿತ ಕಾಲಾವಧಿಯ ಅಂತ್ಯವನ್ನು ಮತ್ತು ಅದರ ವ್ಯವಸ್ಥೆಗಳ ಅಂತ್ಯವನ್ನು ಸೂಚಿಸುತ್ತದೆ.

**ಕೊನೆಯದಾಗಿ 2 ಕೊರಿಂಥದವರಿಗೆ 12:2ರಲ್ಲಿ ಕೊಟ್ಟಿರುವ ಈ "ಮೂರನೇ ಆಕಾಶ" ಎಂದರೇನು?**

ಇದು ಮೂರನೇ ಲೋಕದ ಅದೃಶ್ಯವಾದ ಆತ್ಮೀಕ ಆಡಳಿತವನ್ನು ಸೂಚಿಸುತ್ತದೆ–

ಮೊದಲನೇ ಲೋಕದ ಆಕಾಶವೇ ಮೊದಲ ಆಕಾಶ

ಮತ್ತು ಎರಡನೇ ಲೋಕದ ಆಕಾಶವೇ ಎರಡನೆಯ ಆಕಾಶ


ಭೂಮಿಯ ಮೇಲೆ ದೇವರ ರಾಜ್ಯ ಮತ್ತು ಆ ಕಾಲಾವಧಿಯ ಬಗ್ಗೆಯೇ ಅಪೋಸ್ತಲನಾದ ಪೌಲನ "ದರ್ಶನ" ಗಳನ್ನು ನೋಡಿದನು. ಅದು ಖಂಡಿತವಾಗಿಯೂ ಮಹಿಮಾನ್ವಿತ ಸಮಯ.

ಈಗ ನಾವು ಮೊದಲನೇ ಲೋಕದ ಬಗ್ಗೆ ವಿವರವಾಗಿ ಅಭ್ಯಾಸ ಮಾಡೋಣ.




"ಮೊದಲನೇ ಲೋಕ" ಅಥವಾ "**ಆ ಕಾಲದಲ್ಲಿದ್ದ ಲೋಕ**" (2 ಪೇತ್ರ 3:6) ಆ ಕಾಲವು ಆದಾಮನ ಸೃಷ್ಟಿಯಿಂದ ಮೊದಲುಗೊಂಡು ಜಲಪ್ರಳಯ ಆರಂಭವಾದ ಮೊದಲ ದಿನದವರೆಗೆ ಒಟ್ಟು **1656** ವರ್ಷಗಳಾಗಿದ್ದವು (ಈ ಲೆಕ್ಕಾಚಾರವನ್ನು **22**ನೇ ತರಗತಿಯ ಸತ್ಯವೇದ ಕಾಲಗಣನೆ ಎಂಬ ಅಧ್ಯಯನದಲ್ಲಿ (**Bible Chronology Class # 22**) ಸ್ಪಷ್ಟವಾಗಿ ನಿರೂಪಿಸಲಾಗಿದೆ.)

ಇಲ್ಲಿ "A" ಎಂಬ ಅಕ್ಷರವು ಮೊದಲನೇ ಲೋಕದ ಅವಧಿಯನ್ನು ಸೂಚಿಸುತ್ತದೆ.




**ಮೊದಲನೇ ಲೋಕ ಮತ್ತು ಅದರ ಅದೃಶ್ಯವಾದ (ಕಣ್ಣಿಗೆ ಕಾಣದ)ಆತ್ಮೀಕ ಆಡಳಿತವನ್ನು ಕುರಿತು ನಾವು ಏನು ಓದುತ್ತೇವೆ?**

## ಇಬ್ರಿಯರಿಗೆ 2:5

"ನಾವು ಪ್ರಸ್ತಾಪಿಸುವ ಮುಂದಣ ಸಾಮ್ರಾಜ್ಯವನ್ನು ಆತನು ದೇವದೂತರಿಗೆ ಅಧೀನ ಮಾಡಲಿಲ್ಲವಲ್ಲಾ."

ಈ ಮೇಲಿನ ವಾಕ್ಯವನ್ನು ಓದುವುದರ ಮೂಲಕ ನಾವು ಅರ್ಥಮಾಡಿಕೊಳ್ಳುವುದೇನೆಂದರೆ, ಮೊದಲನೆಯ ಹಾಗು ಈಗಿನ ಎರಡನೆಯ ಲೋಕಗಳನ್ನು ಆಳಲು,

ಬಿದ್ದು ಹೋಗಿರುವ ದುಷ್ಟ ದೂತರಿಗೆ ಅನುಮತಿ ಕೊಡಲಾಗಿತ್ತು

ಈಗ ಮೊದಲನೆಯ ಲೋಕದ ಬಗ್ಗೆ ಒಂದು ಅಂಶವನ್ನು ನೋಡೋಣ.

## ಆದಿಕಾಂಡ 6:3

"...ಅವರು ಭ್ರಷ್ಟರಾದದರಿಂದ ಮರ್ತ್ಯರೇ ಅವರ ಆಯುಷ್ಯವು ನೂರ ಇಪತ್ತು ವರುಷವಾಗಿರಲಿ ಅಂದನು"

**ಏನಿದು? ಇದು ಮನುಷ್ಯನ ಆಯುಷ್ಯ ಕಾಲವನ್ನು ಸೂಚಿಸುತ್ತದೆಯೇ?**

ಮೊದಲನೆಯ ಲೋಕದ ಕಾಲದಲ್ಲಿ ಮನುಷ್ಯನು **850** ವರ್ಷಗಳಿಗಿಂತ ಹೆಚ್ಚು ಕಾಲ ಬದುಕಿದನೆಂದು ನೋಡುತ್ತೇವೆ.

(ಆದಿಕಾಂಡ 5ನೇ ಅಧ್ಯಾಯವನ್ನು ನೋಡಿರಿ)

ಜಲಪ್ರಳಯದ ನಂತರ ಎರಡನೇ ಲೋಕದಲ್ಲೂ ಸಹ ನಾವು ಹೀಗೆ ನೋಡುತ್ತೇವೆ–

**ಆದಿಕಾಂಡ 11:11,13,15**

**" ಶೇಮನು...500 ವರುಷ ಬದುಕಿದನು ಅರ್ಫಕ್ಷದನು 403 ವರುಷ ಬದುಕಿದನು. ಶೆಲಹನು 403 ವರ್ಷ ಬದುಕಿದನು."**

ಇಲ್ಲಿ ನಾವು ಸ್ಪಷ್ಟವಾಗಿ ನೋಡುವುದೇನೆಂದರೆ ಎರಡನೇ ಲೋಕದಲ್ಲಿ ಅನೇಕ ಸಂತತಿಯ ಆಯುಷ್ಕಾಲವು **300** ವರ್ಷ ಕ್ಕಿಂತಲೂ ಹೆಚ್ಚು ಇತ್ತೆಂದು ನೋಡುತ್ತೇವೆ!

**ಹಾಗಾದರೆ ಆದಿಕಾಂಡ 6:3 ವಾಕ್ಯವು ನಿಜವಾಗಿ ಏನನ್ನು ಕುರಿತು ಹೇಳುತ್ತದೆ?**

ಇದು ಪ್ರತಿ ಮನುಷ್ಯನ ಆಯುಷ್ಕಾಲವನ್ನು ಕುರಿತು ಹೇಳುತ್ತಿಲ್ಲ ಜಲಪ್ರಳಯವಾಗುವುದಕ್ಕೆ ಮುಂಚೆ ಇರುವ ಕಾಲವನ್ನು ಪ್ರವಾದನೆಯಾಗಿ ಮತ್ತು ಎಚ್ಚರಿಕೆಯಾಗಿ ನೋಹನಿಗೆ ತಿಳಿಸಿದರು!

ಮೊದಲನೇ ಲೋಕದ ಉಳಿದ ಕಾಲವಧಿಯು ಇಡೀ ಮನುಷ್ಯ ಜಾತಿಗೆ ಕೇವಲ **"ನೂರ ಇಪ್ಪತ್ತು ವರುಷ"**

ಈಗ ಮೊದಲನೇ ಲೋಕವನ್ನು ಕುರಿತು ಇನ್ನೊಂದು ಅಂಶ....

**ಆದಿಕಾಂಡ 1:6**

**" ಬಳಿಕ ದೇವರು - ಜಲಸಮೂಹಗಳ ನಡುವೆ ವಿಸ್ತಾರವಾದ ಗುಮಟವು ಉಂಟಾಗಲಿ; ಅದು ಕೆಳಗಣ ನೀರುಗಳನ್ನೂ ಮೇಲಣ ನೀರುಗಳನ್ನೂ ಬೇರೆ ಬೇರೆ ಮಾಡಲಿ ಅಂದನು. "**

ಈ ವಾಕ್ಯದಲ್ಲಿ, "**ಜಲಸಮೂಹಗಳ ನಡುವೆ**" ಗುಮಟವು ಇರುವುದನ್ನು ಮತ್ತು ಅದು "**ಕೆಳಗಣನೀರುಗಳನ್ನೂ ಮೇಲಣ ನೀರುಗಳನ್ನೂ**" ಬೇರೆ ಬೇರೆಯಾಗಿ ವಿಭಾಗಿಸುವುದನ್ನು ನೋಡುತ್ತೇವೆ.




THE RINGS OF THE WATER CANOPY

**ಇದರ ಅರ್ಥ ಏನಿರಬಹುದು?**

ಇದು ಭೂಮಿಯ ಸುತ್ತಲೂ ಇರುವ ಅನೇಕ ನೀರಿನ ಪದರಗಳು, ಸೂರ್ಯನ ಕಿರಣಗಳು ನೇರವಾಗಿ ಮನುಷ್ಯನ ಮೇಲೆ ಬೀಳಬಾರದೆಂದು ದೇವರು ಮಾಡಿದ ರಕ್ಷಣಾ ಕವಚವಾಗಿತ್ತು.

# ನೀರಿನ ಮೇಲಾವರಣ




ಅದು ಇಡೀ ಭೂಮಿಯನ್ನು ಆವರಿಸಿತ್ತು !!!

**ಅದು ರಕ್ಷಣೆಯ ಬೃಹತ್ ಛತ್ರಿಯ ಹಾಗೆ ಇತ್ತು.**

ಇದನ್ನು ಕುರಿತು ಮತ್ತೆ ಹೀಗೆ ಓದುತ್ತೇವೆ–

**2 ಪೇತ್ರ 3:5**

**“ಪೂರ್ವಕಾಲದಲ್ಲಿದ್ದ ಭೂಮ್ಯಾಕಾಶಗಳು ದೇವರ ವಾಕ್ಯದ ಮೂಲಕ ನೀರಿನಿಂದ ಉಂಟಾಗಿ ನೀರಿನಿಂದ ಆಧಾರಗೊಂಡಿರುವಲ್ಲಿ..”**

ಜಲಪ್ರಳಯದ ಸಮಯದಲ್ಲಿ ಈ ನೀರಿನ ಪದರಗಳು ಒಡೆದು ಹೋಯಿತು.

(ಆದಿಕಾಂಡ **7:11** “ಆಕಾಶದ ತೂಬುಗಳು ತೆರೆದವು”)

(ಆ ನೀರಿನ ಪದರಗಳು ತೆಳುವಾದ ಕಟ್ಟಿಗೆಯ ಪದರಗಳನ್ನು ಅಂಟಿಸಿ ಮಾಡಿದ



ಹಲಗೆಯಂತೆ **(Plywood board)** ಇತ್ತು.


ಈ ನೀರಿನ ಪದರಗಳು ಒಡೆದು **40** ರಾತ್ರಿ ಮತ್ತು **40**
ಹಗಲು ಮಳೆಯಾಗಿ ಬಿದ್ದು ಪೂರ್ತಿಯಾಗಿ ಭೂಮಿಯ ಮೇಲೆ ಜಲಪ್ರಳಯವಾಯಿತು!

**ಆ ರೋಚಕ ದೃಶ್ಯವನ್ನು ಮತ್ತು ಶಬ್ಧವನ್ನು ಊಹಿಸಿಕೊಳ್ಳಿರಿ!**

ಈಗ ಮೊದಲನೇ ಲೋಕದ ಬಗ್ಗೆ ಇನ್ನೊಂದು ಅಂಶ ನೋಡೋಣ

**ಆದಿಕಾಂಡ 2:17**

“ತಿಂದ ದಿನ ಸತ್ತೇ ಹೋಗುವಿ”



**ಆದಾಮನು ಆ ಹಣ್ಣನ್ನು ತಿಂದ “ದಿನ” ಏಕೆ ಸಾಯಲಿಲ್ಲ?**

ಆದಾಮನು **930** ವರ್ಷ ಬದುಕಿದನು ಎಂದು ಓದುತ್ತೇವೆ! (ಆದಿಕಾಂಡ **5:5**)

**ಇದು ಹೇಗೆ?**

ಕೆಲವು ಕ್ರೈಸ್ತರು ಆದಾಮನು "ಆತ್ಮೀಕ"ವಾಗಿ ಅದೇ ದಿನ ಸತ್ತನು.

ಆದರೆ ಶಾರೀರಿಕವಾಗಿ ಬಹಳ ಸಮಯದ ನಂತರ ಸತ್ತನೆಂದು ಅಭಿಪ್ರಾಯ ಪಡುತ್ತಾರೆ.

**ಸತ್ಯವೇದಕ್ಕನುಸಾರವಾಗಿ ಇದು ನಿಜವೇ?** ಮುಂದೆ ನೋಡೋಣ...

ಇಲ್ಲಿ ನಾವು ಅರ್ಥ ಮಾಡಿಕೊಳ್ಳಬೇಕಾದುದ್ದೇನೆಂದರೆ ಇಲ್ಲಿ ಸೂಚಿಸಿರುವ "ದಿನವು”
ಭೂಮಿಯ **24** ಗಂಟೆಗಳ ಕಾಲವಲ್ಲ.
ಆದರೆ ಅಧಿಕವಾದ ಕಾಲವಾಗಿದೆ. ಏಕೆಂದರೆ ಕರ್ತನಾದ ದೇವರು ಇದನ್ನು
ಮಾತನಾಡುತ್ತಿದ್ದನು.

ಇಲ್ಲಿ "**ಕರ್ತನಾದ ದೇವರು**" **ಎಂದರೆ ಯಾರು**?

ಇದು ಮನುಷ್ಯನಾಗಿ ಹುಟ್ಟುವುದಕ್ಕೆ ಮುಂಚೆಯಿರುವ ಯೇಸು ಮತ್ತು ಆತನ ದಿನದ
ಲೆಕ್ಕಾಚಾರವನ್ನು ಕುರಿತು ಏನು ಓದುತ್ತೇವೆ?

ಇಲ್ಲಿ ನಾವು ತಿಳಿದುಕೊಳ್ಳಬೇಕಾದದ್ದೇನೆಂದರೆ "**ದಿನ**" ಎಂಬುದು
24 ಗಂಟೆಗಳ ದಿನವಲ್ಲ

**2 ಪೇತ್ರ 3:8**

**"ಪ್ರಿಯರೇ, ಕರ್ತನ ಎಣಿಕೆಯಲ್ಲಿ ಒಂದು ದಿನವು ಸಾವಿರ ವರುಷಗಳಂತೆಯೂ ಸಾವಿರ ವರುಷಗಳು ಒಂದು ದಿನದಂತೆಯೂ ಅವೆ..."**

**ಹೌದು! ಯೇಸುವಿಗೆ ಒಂದು ದಿನ - ನಮಗೆ ಸಾವಿರ ವರುಷಗಳು.**
**ಅಥವಾ ನಮಗೆ 365,000 ದಿನಗಳು!**

ಮಾನವ ಕುಲದಲ್ಲಿ ಒಬ್ಬನೂ ಸಹ ಆ ಒಂದು "ದಿನ"ವಾದ **1000** ವರ್ಷಗಳನ್ನು ದಾಟಲಿಲ್ಲ.

ಅಧಿಕವಾಗಿ ಒಬ್ಬನು ಬದುಕಿದ ವರ್ಷಗಳೆಂದರೆ **969** ವರ್ಷಗಳು!

ಆತನ ಹೆಸರು **ಮೆತೂಷೆಲಹ.** (ಆದಿಕಾಂಡ **5:27**)

ಈಗ ಇನ್ನೊಂದು ಅಂಶವನ್ನು ನೋಡೋಣ...

**2 ಪೇತ್ರ 2:4**


**"ಹೇಗೆಂದರೆ ದೇವದೂತರು ಪಾಪ ಮಾಡಿದಾಗ ದೇವರು ಅವರನ್ನು ಸುಮ್ಮನೆ ಬಿಡದೆ..."**

**ಈ ದೇವದೂತರು ಯಾರು?**

**ಅವರು "ಪಾಪ" ಮಾಡಿದ್ದಾರೆಂದು ಹೇಳಲಾಗಿದೆ! ಹೇಗೆ?**

ಮುಂದೆ ನೋಡೋಣ–


ಇವೆಲ್ಲಾ ಕಾರ್ಯಗಳು ಮೊದಲನೇ ಲೋಕದಲ್ಲಿ ನಡೆಯಿತು! ಈಗ ಅದನ್ನು ಓದಿ ನೋಡೋಣ....



**ಆದಿಕಾಂಡ 6:1-4**

**"ಭೂಮಿಯ ಮೇಲೆ ಜನರು ಹೆಚ್ಚುತ್ತಾ ಅವರಿಗೆ ಹೆಣ್ಣು ಮಕ್ಕಳು ಹುಟ್ಟಲು ದೇವಪುತ್ರರು ಮನುಷ್ಯಪುತ್ರಿಯರ ಸೌಂದರ್ಯವನ್ನು ನೋಡಿ ತಮಗೆ ಇಷ್ಟರಾದವರನ್ನು ಹೆಂಡರನ್ನಾಗಿ ಮಾಡಿಕೊಂಡರು. ಆಗ ಯೆಹೋವನು–ನನ್ನ ಆತ್ಮವು ಮನುಷ್ಯರಲ್ಲಿ ಶಾಶ್ವತವಾಗಿರುವುದಿಲ್ಲ;**

ಅವರು ಭ್ರಷ್ಟರಾದದರಿಂದ ಮರ್ತ್ಯರೇ. ಅವರ ಆಯುಷ್ಯವು ನೂರ ಇಪ್ಪತ್ತು ವರುಷವಾಗಿರಲಿ ಅಂದನು. ಆ ಕಾಲದಲ್ಲಿ ಅಂದರೆ ದೇವಪುತ್ರರು ಮನುಷ್ಯ ಪುತ್ರಿಯರನ್ನು ಕೂಡಿ ಅವರಲ್ಲಿ ಮಕ್ಕಳನ್ನು ಪಡೆಯುವ ಕಾಲದಲ್ಲಿ ಮಹಾ ಶರೀರಿಗಳು ಭೂಮಿಯ ಮೇಲಿದ್ದರು. ಅನಂತರದಲ್ಲಿಯೂ ಇದ್ದರು ಪೂರ್ವದಲ್ಲಿ ಹೆಸರುಗೊಂಡ ಪರಾಕ್ರಮಶಾಲಿಗಳು ಇವರೇ."



ಹೌದು ! ಈ ದೇವದೂತರು ಮನುಷ್ಯಜಾತಿಗೆ ಸಹಾಯ ಮಾಡಲು ಬಂದು ಮನುಷ್ಯ ರೂಪದಲ್ಲಿಯೇ ಇರುವಂತೆ ಬಹುಶಃ ಸೈತಾನನಿಂದ ವಂಚಿಸಲ್ಪಟ್ಟರು. ಈ ದೇವದೂತರು ಬೇಕೆಂದಾಗ ಮನುಷ್ಯ ರೂಪವನ್ನು ಹೊಂದಿಕೊಳ್ಳಬಹುದಿತ್ತು ಅಥವಾ ಮನುಷ್ಯ ರೂಪದಲ್ಲಿ ಪ್ರಕಟವಾಗಬಹುದಿತ್ತು ಇದಲ್ಲದೆ ಅವರು ಮನುಷ್ಯ ಪುತ್ರಿಯನ್ನು ಮದುವೆಯಾಗಿ ನೆಫಿಲಿಮ್ ಎಂಬ ಹೊಸ ಸಂತತಿಯನ್ನು ಉಂಟುಮಾಡಿದರು.

**ಇವರು ಅರ್ಧ ಮನುಷ್ಯ ಮತ್ತು ಅರ್ಧ ದೇವದೂತರು!! ಮತ್ತು ಇವರು ರಾಕ್ಷಸರಾಗಿದ್ದರು!**

ಈ ದೇವದೂತರ ಮಕ್ಕಳು ಭೂಮಿಯ ಮೇಲೆ ಪ್ರಭುತ್ವಮಾಡಲು ಮತ್ತು ಅದನ್ನು ಭ್ರಷ್ಟಗೊಳಿಸಲು ಆರಂಭಿಸಿದರು.

ಅವರು ಮನುಷ್ಯರ ಮೇಲೆ ಎಷ್ಟು ಪ್ರಭಾವ ಬೀರಿದರೆಂದು ಮುಂದಿನ ವಾಕ್ಯದಲ್ಲಿ ನೋಡುತ್ತೇವೆ

**ಆದಿಕಾಂಡ 6:5,6**

"ಮನುಷ್ಯರ ಕೆಟ್ಟತನವು ಭೂಮಿಯ ಮೇಲೆ ಹೆಚ್ಚಾಗಿರುವದನ್ನೂ ಅವರ ಹೃದಯದಲ್ಲಿ ಯೋಚಿಸುವುದೆಲ್ಲವು ಯಾವಾಗಲೂ ಬರೀ ಕೆಟ್ಟದಾಗಿರುವದನ್ನೂ.... "

ಈ ಉನ್ನತವಾದ ಮತ್ತು ನೀತಿಭ್ರಷ್ಟರಾದ ಈ "ರಾಕ್ಷಸ"ರಿಗೆ ಮನುಷ್ಯರು ಅತಿಬೇಗನೆ ಗುಲಾಮರಾದರು.

ಆದ್ದರಿಂದ ದೇವರು ಆತನ ಜ್ಞಾನ ಮತ್ತು ಪ್ರೀತಿಯಿಂದ ಇವೆಲ್ಲವುಗಳನ್ನು ಜಲಪ್ರಳಯದ ಮೂಲಕ ಅಂತ್ಯಗೊಳಿಸಿದರು.

# ತಕ್ಷಣ ಮತ್ತು ನೋವಿಲ್ಲದ ಮರಣದ ವಿಧಾನದ ಮೂಲಕ ಎಲ್ಲರನ್ನೂ ನಾಶಮಾಡಿದನು!!

**ಈ ದೇವದೂತರು ಮಾಡಿದ "ಪಾಪ"ವೇನು?**

**ಯೂದ 6**

"ತಮ್ಮ ದೊರೆತನವನ್ನು ಕಾಪಾಡದೆ ತಮಗೆ ತಕ್ಕ ವಾಸಸ್ಥಾನವನ್ನು ಬಿಟ್ಟ ದೇವದೂತರಿಗೆ...."




ಹೌದು! ಇವರುಗಳು ತಮ್ಮ "ದೂತ" ಸ್ವಭಾವವನ್ನು ಅನುಸರಿಸದೆ ದೇವರ ಚಿತ್ತಕ್ಕೆ ವಿರುದ್ಧವಾಗಿ ಪಾಪ ಮಾಡಿ ಮನುಷ್ಯರ ಮತ್ತು ದೂತರ ಸ್ವಭಾವವನ್ನು ಮಿಶ್ರಣ ಮಾಡಿದರು!

ಆದರೆ ಈ ಜಲಪ್ರಳಯದ ನಾಶನದಿಂದ ನೋಹ ಮತ್ತು ಅವನ ಕುಟುಂಬ ಮಾತ್ರ ರಕ್ಷಿಸಲ್ಪಟ್ಟಿತು.

(**ಆದಿಕಾಂಡ 6:17,18**)

**ಹೀಗೇಕೆ?** ನಾವು ಮುಂದೆ ಓದುತ್ತೇವೆ...

**ಆದಿಕಾಂಡ 6:9**


"ನೋಹನು ನೀತಿವಂತನೂ ತನ್ನ ಕಾಲದವರಲ್ಲಿ ತಪ್ಪಿಲ್ಲದವನೂ ಆಗಿದ್ದನು; ಅವನು ದೇವರೊಂದಿಗೆ ಅನ್ಯೋನ್ಯವಾಗಿ ನಡೆದು ಕೊಂಡನು."

ನೋಹನು "**ತನ್ನ ಕಾಲದವರಲ್ಲಿ ತಪ್ಪಿಲ್ಲದವ**"ನಾಗಿದ್ದನು.

ಅಂದರೆ ಅವನ ಕುಟುಂಬದವರಲ್ಲಿ ದೂತರ ರಕ್ತ ಬೆರೆತಿರಲಿಲ್ಲ ಆದರೆ ಬೇರೆ ಕುಟುಂಬದವರಲ್ಲಿ ಅದು ಬೆರತಿತ್ತು.

**ನೋಹನ ಕುಟುಂಬದವರು ಶುದ್ಧರಾದ ಮನುಷ್ಯರಾಗಿದ್ದರು!**

ಅದಲ್ಲದೆ ನೋಹನು ದೇವರಿಗೆ ಭಯ ಪಡುವ ಮನುಷ್ಯನಾಗಿದ್ದನು!



ನಂತರ ನೋಹನ ಬಗ್ಗೆ ಏನು ಓದುತ್ತೇವೆ?

**2 ಪೇತ್ರ 2:5**

"ನೀತಿಯನ್ನು ಸಾರುವವನಾಗಿದ್ದ ನೋಹ....."

**ಇದರ ಅರ್ಥವೇನು?**

**ನೋಹನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹೋಗಿ ಭೋದಿಸುತ್ತಿದ್ದನೆಂದು ಅರ್ಥವೇ?**

ನೀತಿ "ಸಾರುವು"ದರಲ್ಲಿ ಎರಡು ವಿಧಗಳಿವೆ–

1. ಮಾತುಗಳ ಮೂಲಕ ನಾಲಿಗೆಯಿಂದ ಸಾರುವುದು.
2. ನಡತೆಯ ಮೂಲಕ ಕ್ರಿಯೆಯಿಂದ ಸಾರುವದು.

**ನೋಹನು ಎರಡನೆಯ ರೀತಿಯಲ್ಲಿ "ಸುನೀತಿಯನ್ನು ಸಾರಿದನು" ಏಕೆಂದರೆ "ಮಾತಿಗಿಂತಲು ಕ್ರಿಯೆಯು ಪರಿಣಾಮಕಾರಿಯಾಗಿದೆ"**

ದೇವರ ವಾಕ್ಯಕ್ಕೆ ನೋಹನು ವಿಧೇಯನಾಗಿ  ನಂಬಿಕೆಯಿಂದ **120** ವರ್ಷದಲ್ಲಿ ಕಟ್ಟಿದ ಬೃಹತ್ತಾದ ನಾವೆಯು ಮೊದಲ ಲೋಕಲ್ಲಿ "ದೊಡ್ಡ ನೀತಿಬೋಧನೆ"ಯಾಗಿತ್ತು.

ಆದಿಕಾಂಡ **6:22**



ನೋಹನು ನಾವೆಯನ್ನು ಕಟ್ಟಲು ಆರಂಭಿಸುವಾಗ, ಆ ನಾವೆಯು ಆತನಿಗೆ ಮತ್ತು ಆತನ ಕುಟುಂಬಕ್ಕೆ ಮಾತ್ರ ಕಾಣಿಸುತ್ತಿತ್ತು ಮತ್ತು ಅದರ ಬಗ್ಗೆ ಅವರಿಗೆ ಮಾತ್ರ ಗೊತ್ತಿತ್ತು. ನಾವೆ ಸ್ವಲ್ಪ ದೊಡ್ಡದಾದ ಮೇಲೆ ಆದು ಅವನ ನೆರೆಹೊರೆಯವರಿಗೆ ಗೊತ್ತಾಯಿತು ಮತ್ತು ಅವರ ಕಣ್ಣಿಗೆ ಕಾಣಿಸುತ್ತಿತ್ತು. ನಂತರ, ಕಾಲಕ್ರಮೇಣವಾಗಿ ಆ ನಾವೆಯು ಬಹಳ ದೊಡ್ಡದಾಗುತ್ತಾ ಬರಲು ಆ ಪ್ರದೇಶದಲ್ಲಿರುವವರೆಲ್ಲರಿಗೂ ಕಾಣಿಸತೊಡಗಿತು

ಮತ್ತು ಕೊನೆಯದಾಗಿ ಆ ನಾವೆಯನ್ನು ಮಾಡಿ ಮುಗಿಸುವ ಸಮಯದಲ್ಲಿ ಆ ನಾವೆಯು ಭೂಮಿಯ ಮೇಲೆ ದೈತ್ಯಾಕಾರದಲ್ಲಿ ನಿಲ್ಲಲು ಸುತ್ತಮುತ್ತಲಿರುವ ಎಲ್ಲಾ ಜನರಿಗೂ ಕಾಣಿಸತೊಡಗಿತು.

ಆಮೇಲೆ ಆ ನಾವೆಯ ಬಗ್ಗೆ ನೋಹನ ಬಳಿ ಅನೇಕರು ವಿಚಾರಣೆ ಮಾಡಿರಬಹುದು ಮತ್ತು ಅದಕ್ಕೆ ನೋಹನು ಮಳೆ ಮತ್ತು ಜಲಪ್ರಳಯ ಬರುತ್ತದೆ ಎಂಬ ಉತ್ತರಕ್ಕೆ ಜನರೆಲ್ಲರೂ ಹಾಸ್ಯಮಾಡಿರಬಹುದು.


ಆದರೆ ನೋಹನು ತನ್ನ ಕೆಲಸವನ್ನು ಎಂದಿಗೂ ನಿಲ್ಲಿಸಲಿಲ್ಲ
ಅಥವಾ ತನ್ನ ನಂಬಿಕೆಯನ್ನು ಕಳೆದುಕೊಳ್ಳಲಿಲ್ಲ.

**ಹೌದು ! ನಿಶ್ಚಯವಾಗಿಯೂ ಆತನ ಪ್ರಯಾಸವು ಅಧಿಕವಾದ "ನೀತಿ ಬೋಧನೆಯಾಗಿತ್ತು."**

ಮತ್ತು ಅದು ಎಂತಹ ನಾವೆಯಾಗಿತ್ತು. (ಆದಿಕಾಂಡ 6:15)

300 ಮೊಳ ಉದ್ದವು, (450 ಅಡಿ) 50 ಮೊಳ ಅಗಲವು (75 ಅಡಿ) ಮತ್ತು 30 ಮೊಳ ಎತ್ತರವು (45 ಅಡಿ) ಉಳ್ಳದಾಗಿತ್ತು.

**ಇಂತಹ ನಾವೆ ಕಟ್ಟುವುದನ್ನು ಊಹಿಸಿ ನೋಡಿರಿ!**



ಮತ್ತು ಅದನ್ನು ನಿರ್ಮಿಸುವುದಕ್ಕೆ ಈ ದಿನಗಳ ಹಾಗೆ ತಂತ್ರಜ್ಞಾನ ಯಂತ್ರೋಪಕರಣಗಳು ಯಾವುದೂ ಇರಲಿಲ್ಲ ಮತ್ತು ಕೇವಲ ಮೂಲಭೂತವಾದ ಉಪಕರಣ ಮಾತ್ರವಿದ್ದಿತು.

**ಅದರ ಒಟ್ಟು ಅಳತೆ ಸುಮಾರು ಕಾಲುಚೆಂಡು ಆಟದ (football ground) ಮೈದಾನದಷ್ಟು ದೊಡ್ಡದಾಗಿತ್ತು**

ಮತ್ತು ಇದಲ್ಲದೆ ಭೂಮಿಯ ಮೇಲೆ ಆ ತನಕ ಒಂದೇ ಒಂದು ಸಾರಿಯೂ ಮಳೆಯಾಗಿರಲಿಲ್ಲ.
ಇದನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಓದೋಣ

**ಆದಿಕಾಂಡ 2:5,6**

" ಯೆಹೋವ ದೇವರು ಭೂಮ್ಯಾಕಾಶಗಳನ್ನು ಉಂಟು ಮಾಡಿದಾಗ ಯಾವ ಗಿಡವಾದರೂ ಭೂಮಿಯಲ್ಲಿ ಇರಲಿಲ್ಲ, ಯಾವ ಪಲ್ಯವೂ ಹುಟ್ಟಿರಲಿಲ್ಲ, ಯಾಕೆಂದರೆ


ಯೆಹೋವ ದೇವರು ಭೂಮಿಯ ಮೇಲೆ ಮಳೆಯನ್ನು ಸುರಿಸಿರಲಿಲ್ಲ; ಭೂಮಿಯನ್ನು ವ್ಯವಸಾಯ ಮಾಡುವುದಕ್ಕೆ ಮನುಷ್ಯನೂ ಇರಲಿಲ್ಲ. ಆದರೂ ಭೂಮಿಯಿಂದ ಮಂಜು ಹಬ್ಬಿ ನೆಲವನ್ನೆಲ್ಲಾ ತೋಯಿಸುತ್ತಿತ್ತು.”

**ಹೌದು! ಮಳೆಯೆಂದರೆ ಏನೆಂಬುದು ಯಾರಿಗೂ ಗೊತ್ತಿರಲಿಲ್ಲ!**

ಮರಗಳಿಗೆ ಮಂಜು ನೀರು ತೋಯಿಸುತ್ತಿತ್ತು.

ನೋಹನು "ಮಳೆ"ಯ ಬಗ್ಗೆ ಮಾತಾಡಿದಾಗ ಅದು ಯಾರಿಗೂ ಅರ್ಥವಾಗಲಿಲ್ಲ.

ಮತ್ತು ಇಡೀ ಭೂಮಿಯನ್ನು ಜಲಪ್ರಳಯವಾಗುವಂತೆ ಮಾಡುವ ಮಳೆ ಬರುತ್ತದೆ ಎಂದಾಗ ಅದು ಅವರಿಗೆ ಅರ್ಥವಾಗಲಿಲ್ಲ



**ನೋಹನನ್ನು ನೋಡಿ ಹಾಸ್ಯಮಾಡಿ ಅವನನ್ನು ಹುಚ್ಚನೆಂದು ಭಾವಿಸಿದರು.**

ಆದರೆ ನೋಹನು ನಂಬಿದನು ಮತ್ತು ತನ್ನ ನಂಬಿಕೆಯನ್ನು ಕ್ರಿಯೆಗಳ ಮೂಲಕ ವ್ಯಕ್ತಪಡಿಸಿದನು.

**ಈ ರೀತಿಯ ನಂಬಿಕೆಯಿಂದ ನೋಹನು ಮತ್ತು ಆತನ ಕುಟುಂಬದವರಾದ 7 ಜನರು ಮೊದಲನೆಯ ಲೋಕದಿಂದ ಎರಡನೆಯ ಲೋಕವನ್ನು ಪ್ರವೇಶಿಸಿದರು.**

ಮುಂದಿನ ಅಭ್ಯಾಸದಲ್ಲಿ ನಾವು ಜಲಪ್ರಳಯದ ನಂತರ ನೋಹ ಮತ್ತು ಆತನ ಕುಟುಂಬವನ್ನು ಕುರಿತು ನೋಡಲಿದ್ದೇವೆ ಮತ್ತು **2**ನೇ ಲೋಕ ಹೇಗೆ ಆರಂಭವಾಯಿತು ಮತ್ತು ಯಾರ ಮೂಲಕವಾಗಿ ಈ ದಿನಗಳಲ್ಲಿ ಜೀವಿಸುತ್ತಿರುವ ಮನುಷ್ಯ ಜಾತಿಯು ಉತ್ಪತ್ತಿಯಾಯಿತು ಎಂದು ಅಭ್ಯಾಸ ಮಾಡಲಿದ್ದೇವೆ.

ಸದ್ಯಕ್ಕೆ ನೋಹ ಮತ್ತು ಆತನ ಕುಟುಂಬ ನಾವೆಯಲ್ಲಿದೆ ಮತ್ತು ಜಲಪ್ರಳಯವು
ಮೊದಲನೇ ಲೋಕದ ಭೂಮಿಯನ್ನು ತುಂಬಿ ನಾಶಮಾಡಿದೆ
ಎಂಬುವದರೊಂದಿಗೆ ನಿಲ್ಲಿಸೋಣ.

**.....ಆಮೆನ್.....**



For Private Circulation Only




NOT FOR SALE

For more Subjects contact: MESSENGERS OF CHRIST  E-mail: thekingdom1_6@yahoo.com